**ಎಮ್.ವಿ.ಸಿ. ನಂಃ1367 /2024**
**ಪಿ.ಡಬ್ಲ್ಯೂಃ1,**

**ದಿನಾಂಕ : 19-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ. ವಿ.ಎಸ್.ಆರ್. ಅರ್ಜಿದಾರ ಪರ ವಕೀಲರಿಂದ :**

ಇಲ್ಲಾ ಎಂದು ಸಲ್ಲಿಸಿರುತ್ತಾರೆ.

**ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ಎದುರುದಾರ ಪರ ವಕೀಲರಿಂದ :**

ಸದರಿ ಅಪಘಾತವು ದಿ: 26-06-2024 ರಂದು ಸಯಾಂಕಾಲ 5-00 ಗಂಟೆಗೆ ಓಂ ನಗರ ಕಲುಬರಗಿಯಲ್ಲಿರುವ ಉಡುಪಿ ಹೋಟೇಲ ಹತ್ತಿರ ಆಗಿರುತ್ತದೆ. ಅಪಘಾತವನ್ನು ನಾನು ನೋಡಿಲ್ಲಾ. ಸದರಿ ಅಪಘಾತದ ಬಗ್ಗೆ ನನ್ನ ಅಕ್ಕನ ಮಗಳು ನಿಶಾ ಇವಳು ತಿಳಿಸಿರುತ್ತಾಳೆ. ಮೃತ ವೀರಯ್ಯಾ ಸ್ವಾಮಿ ನನ್ನ ತಂದೆ ಅಪಘಾತ ಆದ ನಂತರ ಅವರನ್ನು ಇ.ಎಸ್.ಐ. ಆಸ್ಪತ್ರೆಗೆ ದಾಖಲಿಸಲಾಯಿತು. ಒಂದು ದಿನ ದಾಖಲು ಮಾಡಲಾಯಿತು. ನಂತರ ಮಾರನೇ ದಿನ ಕಲುಬರಗಿಯ ಜಿಮ್ಸ ನಲ್ಲಿ ದಾಖಲು ಮಾಡಲಾಯಿತು. ರೂ. 3,50,000/- ಹಣ ಇ.ಎಸ್.ಐ. ಮತ್ತು ಜಿಮ್ಸ ಆಸ್ಪತ್ರೆಯಲ್ಲಿ ಖರ್ಚು ಆಗಿದೆ. ಇ.ಎಸ್.ಐ. ಆಸ್ಪತ್ರೆಯ ದಾಖಲು ಸಲ್ಲಿಸಿಲ್ಲಾ. ನಮ್ಮ ತಂದೆಗೆ ಮೂರು ಜನ ಮಕ್ಕಳು, ನಾನು ಮತ್ತು 2 ಮತ್ತು 3ನೇ ಅರ್ಜದಾರಳು. ನಾನು ಬಟ್ಟೆ ವ್ಯಾಪಾರ ಮಾಡುತ್ತೇವೆ. 2ನೇ ಅರ್ಜದಾರ ಖಾಸಗಿಯಾಗಿ ಕೆಲಸ ಮಾಡುತ್ತಾರೆ. 3ನೇ ಅರ್ಜದಾರಳ ಮದುವೆ ಆಗಿದ್ದು, ಅವಳ ಮದುವೆ ಆಗಿ 2 ವರ್ಷಗಳ ನಂತರ ಅವರ ಗಂಡನ ತೊಂದರೆಗೊಳಪ್ಪಟ್ಟು ಮರಳಿ ಬಂದು ನಮ್ಮ ಜೊತೆ ಇದ್ದಾಳೆ ಅವಳನ್ನು ನಾವೇ ಸಾಕುತ್ತಿದ್ದೇವೆ. ಅರ್ಜಿದಾರಳ ನಂ-4 ಮತ್ತು 5 ನಮ್ಮ ಜೊತೆಗೆ ಇದ್ದಾರೆ ಅವರನ್ನು ನಾವೇ ನೋಡಿಕೊಳ್ಳುತ್ತೇವೆ. ನಮ್ಮ ತಂದೆ ತೀರಿ ಹೋದಾಗ ಅವರಿಗೆ 70 ವರ್ಷ. ಪಿ.ಎಮ್. ವರದಿ ಪ್ರಕಾರ ನನ್ನ ತಂದೆ ವಯಸ್ಸು 72 ವರ್ಷ ತೋರಿಸಿದ್ದಾರೆ ಎಂದರೆ ಸರಿಯಲ್ಲ . ನಮ್ಮ ತಂದೆಗೆ 70 ವರ್ಷ ಅಂತಾ ಸುಳ್ಳು ಸಾಕ್ಷಿ

**ಎಮ್.ವಿ.ಸಿ. ನಂಃ1367 /2024**
**ಪಿ.ಡಬ್ಲ್ಯೂಃ1,**

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಾಯಿ ಮರಣ ಹೊಂದಿದ್ದಾರೆ. ದೂರನ್ನು ನಮ್ಮ ಸಹೋದರಿ ನೀಡಿದ್ದಾಳೆ. ದೂರನ್ನು ದಿ: 28-06-2024 ರಂದುನೀಡಿದ್ದಾರೆ ಎಂದರೆ ಸರಿ. ನಮ್ಮ ತಂದೆಯವರು ಚಹಾ ಅಂಗಡಿಯಿಂದ ತಿಂಗಳಿಗೆ ರೂ. 25,000/- ಗಳಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಮತ್ತು 2 ಮತ್ತು 3 ನೇ ಅರ್ಜಿದಾರಳು ನಮ್ಮ ತಂದೆ ದುಡಿಮೆ ಮೇಲೆ ಅವಲಂಬಿತರು ಇದ್ದೇವೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 3ನೇ ಅರ್ಜದಾರಳು ತನ್ನ ಗಂಡ ಜೊತೆ ವಾಸ ಇದ್ದು ಅವರ ನಮ್ಮ ಜೊತೆ ಇದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಸದರಿ ಅಪಘಾತವು ಕೆ.ಎ.32-ಇ.ಕೆ. -7369 ವಾಹನ ಡಿಕ್ಕಿ ಪಡಿಸಿದ ಕಾರಣ ಅಪಘಾತ ಆಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆಯವರು ಸದರಿ ಮೋಟಾರ ಸೈಕಲನ್ನು ಚಲಾಯಿಸಿಕೊಂಡು ಅವರೇ ಬಿದ್ದು ಗಾಯ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು , 1 ನೇ ಎದುರುದದಾರ ಮತ್ತು ಪೋಲಿಸರೊಂದಿಗೆ ಮಿಲಾಫೆ ಪ್ರಕರಣವನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲಾ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಯಾವುದೇ ಕೆಲಸ ಮಾಡುತ್ತಿರಲಿಲ್ಲಾ, ಮನೆಯಲ್ಲಿಯೇ ಇದ್ದರು ಎಂದರೆ ಸರಿಯಲ್ಲ. 2ನೇ ಎದುರುದಾರರು ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**